ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಬಿಜಾಪುರ ಜಿಲ್ಲೆಯಲ್ಲಿ 96-97ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿಯು ಈ ಕೆಳಗಿನಂತೆ ವಸತಿ ಗೃಹಗಳನ್ನು ನಿರ್ಮಿಸಲು ಯೋಜಿಸಿದೆ.

ಜಮಖಂಡಿ	ಎಲ್ಐಜಿ	93
	ಎಂಐಜಿ	58
	ಹೆಚ್ಐಜಿ	42
	ಒಟ್ಟು	193
ಇಂಡಿ	ಇಡಬ್ಲ್ಯುಎಸ್	96
	ಎಲ್ಐಜಿ	60
	ಎಂಐಜಿ	48
	ಹೆಚ್ಐಜಿ	16
	ಒಟ್ಟು	220

ಆ) ಪ್ರಸಕ್ತ ವರ್ಷದಲ್ಲಿ ಬಿಜಾಪುರ ನಗರದಲ್ಲಿ ಗೃಹ ಮಂಡಲಿಯು ಯಾವುದೇ ವರ್ಗದ ಮನೆಗಳನ್ನು ನಿರ್ಮಿಸುವ ಪ್ರಸ್ತಾಪ ಇರುವುದಿಲ್ಲ.

ಇ) ಸದ್ಯಕ್ಕೆ ಅಂತಹ ಯೋಜನೆ ಇರುವುದಿಲ್ಲ. ಗೃಹ ನಿರ್ಮಾಣ ಮಂಡಲಿಯ ಸಾಮಾನ್ಯ ಯೋಜನೆಯಡಿಯಲ್ಲಿ ಮನೆಗಳನ್ನು ಪಡೆಯಲು ಇಂತಹವರೂ ಸಹ ಪಾಲ್ಗೊಳ್ಳಬಹುದಾಗಿರುತ್ತದೆ.

ವಿಷಯ:- ಬಿಜಾಪುರ ನಗರದಲ್ಲಿ ವಿದ್ಯುತ್ ದೀಪಗಳನ್ನು ಒದಗಿಸುವುದು

1441 (1093) ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ನಗರದಲ್ಲಿ ಸಾರಿಗೆ ದಟ್ಟಣೆಯಿಂದ ವಿದ್ಯುತ್ ದೀಪಗಳ ಅವಕಾಶವಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ನಗರದ ಯಾವ ಯಾವ ಪ್ರದೇಶಗಳಲ್ಲಿ ಸಾರಿಗೆ ವಿದ್ಯುತ್ ದೀಪಗಳನ್ನು ಹಾಕಲು ನಿರ್ಧರಿಸಿದೆ ?

ಇ) ಇದನ್ನು ಎಂದಿನಿಂದ ಪ್ರಾರಂಭಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) –ಹೌದು–

ಆ) ವಿಜಾಪುರ ನಗರದ ಪ್ರಮುಖ ವೃತ್ತಗಳಲ್ಲಿ ಅಂದರೆ ಶಹರದ ವಾಟರ್ ಟ್ಯಾಂಕ್ ವೃತ್ತ,

ಗಾಂಧಿ ಚೌಕ ಮತ್ತು ಬಸವೇಶ್ವರ ವೃತ್ತಗಳಲ್ಲಿ ಸ್ವಯಂಚಾಲಿತ ವಿದ್ಯುತ್ ಸಿಗ್ನಲ್ ದೀಪಗಳನ್ನು ಅಳವಡಿಸಲು ತಾಂತ್ರಿಕ ಪರಿಶೀಲನೆ ನಡೆಸಲಾಗಿದೆ.

ಇ) ಈ ದಿಸೆಯಲ್ಲಿ ಯೋಜನೆ ತಯಾರಿಸಿದ್ದು ಸ್ಥಳೀಯ ವಿಜಾಪುರ ಅಭಿವೃದ್ಧಿ ಪ್ರಾಧಿಕಾರ, ಎ.ಪಿ. ಎಂ.ಸಿ. ಮತ್ತು ಛೇಂಬರ್ ಆಫ್ ಕಾಮರ್ಸ್ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಅನುದಾನ ಪಡೆದುಕೊಳ್ಳುವ ಹಂತದಲ್ಲಿರುತ್ತದೆ.

ವಿಷಯ:- ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕ ಆಯುಕ್ತರ ಕಛೇರಿಯಲ್ಲಿರುವ ಖಾಲಿ ಹುದ್ದೆಗಳು.

1443 (2387) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕ ಆಯುಕ್ತರ ಇಲಾಖೆಯಲ್ಲಿ ಇರುವ ಖಾಲಿ ಹುದ್ದೆಗಳೆಷ್ಟು? (ವೃಂದ ಮತ್ತು ಸ್ಥಳಾವಾರು ಪಟ್ಟಿ ನೀಡುವುದು)

ಆ) ಈ ಇಲಾಖೆಗೆ ನಿಯೋಜನೆ ಮೇಲೆ ನೌಕರರನ್ನು ನೀಡಲು ಬಂದಿರುವ ಪ್ರಸ್ತಾವನೆಗಳೆಷ್ಟು? (ಪಟ್ಟಿ ನೀಡುವುದು)

ಇ) ಇತರ ಇಲಾಖೆಯ ನೌಕರರನ್ನು ನಿಯೋಜನೆ ಮೇಲೆ ಪಡೆದು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ? ಹಾಗಿದ್ದಲ್ಲಿ, ಬೇಕಾಗುವ ಕಾಲಾವಕಾಶವೆಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ವೃಂದ ಹಾಗೂ ಸ್ಥಳಾವಾರು ಪಟ್ಟಿಯನ್ನು ಲಗತ್ತಿಸಿದೆ.

ಆ) ಹಾಲಿ ಸಚಿವಾಲಯದ ಒಬ್ಬ ಹಿರಿಯ ಸಹಾಯಕರನ್ನು ಹಾಗೂ ಕಂದಾಯ ಇಲಾಖೆಯ ಒಬ್ಬ ಪ್ರಥಮ ದರ್ಜೆ ಸಹಾಯಕರನ್ನು ನಿಯೋಜನೆ ಮೇಲೆ ತೆಗೆದುಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಹೌದು, ಹಾಲಿ 9 ಜನ ಕೆ.ಐ.ಎಸ್. ಅಧಿಕಾರಿಗಳು 4 ಜನ ತಹಸೀಲ್ದಾರ್ (ಗ್ರೇಡ್–2) ಅಧಿಕಾರಿಗಳು ಹಾಗೂ 9 ಜನ ಶಿರಸ್ತೇದಾರರು ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. (ಪಟ್ಟಿ ಲಗತ್ತಿಸಿದೆ).

ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಲಾಗುವುದು.